SRI M. MALLIKARJUNA KHARGE —By submitting a written representation to the Speaker in that behalf. I can convince. It is there.

SRI RAMAKRISANA HEGDE.—Is there any provision under which you can raise this question again on the floor of the House

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೀಕನ್ಸಿಡರ್ ಮಾಡುವುದಕ್ಕೆ ಪ್ರಾವಿಷನ್ ಇದೆ. ಮಾನ್ಯ ಪಂಪ್ಸ್ ಮಂತ್ರಿಯವರು ಅದನ್ನು ಸರಿಯಾಗಿ ಓದಿಲ್ಲವೆಂದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗ್ಡೆ.—ತಾವು ಇವತ್ತು. ನಿನ್ನೆ ಮೆಂಬರ್ ಆದವರ ಹಾಗೆ ಮಾತನಾಡುತ್ತಿದ್ದೀರಿ. ಇದುವರೆವಿಗೂ ಸದನದ ಸಮಯವನ್ನು ಹಾಳು ಮಾಡಿದಿರಿ. ಸ್ಪಷ್ಟವಾಗಿ ರೂಲಿಂಗ್ ಇದೆ. ಕೌಲ್ ಅಂಡ್ ಶೆಕ್ದರ್‌ನಲ್ಲಿ ಇದೆ. ನೀವು ಈ ರೀತಿ ಮಾಡಿದರೆ ಹೇಗೆ ?

ಅಧ್ಯಕ್ಷರು.—ಈಗ ಪಟಮಕ್ಕಿ ರತ್ನಾಕರ್ ಅವರ ಗಮನ ಸೆಳೆಯುವ ಸೂಚನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚೇಂಬರ್‌ನಲ್ಲೂ ರೀಕನ್ಸಿಡರ್ ಮಾಡಬಹುದಂ, ಇಲ್ಲಿಯೂ ಕೂಡಾ ರೀಕನ್ಸಿಡರ್ ಮಾಡಬಹುದು ಎಂದು ಇದೆ.

ಅಧ್ಯಕ್ಷರು.—ಈ ವಿಷಯ ಇಲ್ಲಿಗೆ ಸಾಕಂ. You come to my chamber and convince me.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಕೊಟ್ಟ ರೂಲಿಂಗ್ ಇದು ಅಲ್ಲವೇ ?

ಅಧ್ಯಕ್ಷರು.—ತಾವು ನಾಲ್ಕೂ ಮಂದಿ ನನ್ನ ಚೇಂಬರ್‌ಗೆ ಬನ್ನಿ.

SRI M. MALLIKARJUNA KHARGE.—To reconsider either we can give written representation.....

SRI RAMAKRISHNA HEGDE.—You can give written representation.

೩-೩೦ ಪಿ. ಎಂ.

(ಗೊಂದಲ)

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆ. ಶ್ರೀ ರತ್ನಾಕರ್‌ರವರೇ ನೀವು ಹೇಳಿ.

ಗಮನ ಸೆಳೆಯುವ ಸೂಚನೆಗಳು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ನೌಕರರು ಅಗತ್ಯ ಬೇಡಿಕೆಗಳ ಈಡೇರಿಕೆಗಾಗಿ ನಡೆಸಿರುವ ಧರಣಿ ಸತ್ಯಾಗ್ರಹದ ಬಗ್ಗೆ.

† ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ನೌಕರರು ತಮ್ಮ ಅಗತ್ಯ ಬೇಡಿಕೆಗಳ ಈಡೇರಿಕೆಗಾಗಿ ನಡೆಸಿರುವ ಧರಣಿ ಸತ್ಯಾಗ್ರಹದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆಯನ್ನು ಓದುತ್ತೇನೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪ್ರಸ್ತುತ ನೌಕರರ ಸಂಘದ ಸದಸ್ಯರುಗಳು ಆಯ್ಕೆಯಾಗುವ ಮುನ್ನ ಇದ್ದಂತಹ ಸಂಘದ ಪದಾಧಿಕಾರಿಗಳು ಮಂಡಿಸಿದ್ದ ಬೇಡಿಕೆಗಳು ೧-೭-೧೯೬೬ರಿಂದಲೇ ಅನ್ವಯವಾಗುವಂತೆ ದಿನಾಂಕ ೧-೭-೧೯೬೭ರಂದು ಇತ್ಯರ್ಥಗೊಂಡಿತು. ದಿನಾಂಕ ೧-೫-೧೯೬೭ರಂದು ನಡೆದ ಚುನಾವಣೆಯಲ್ಲಿ ಆಯ್ಕೆಗೊಂಡ ಈಗಿನ ಸಂಘದ ಪದಾಧಿಕಾರಿಗಳು ೬೨ ಬೇಡಿಕೆಗಳ ಒಂದು ಪಟ್ಟಿಯನ್ನು ಸಲ್ಲಿಸಿದ್ದರು. ಇದರ ಬಗ್ಗೆ ಮಂಡಳಿಯ ಆಡಳಿತ ವರ್ಗದವರು ಸಂಘದ ಪದಾಧಿಕಾರಿಗಳೊಂದಿಗೆ ಹಲವಾರು ಬಾರಿ ಚರ್ಚಿಸಿ ಇವರ ಒಟ್ಟು ೬೨ ಬೇಡಿಕೆಗಳಲ್ಲಿ ೩೫ ಬೇಡಿಕೆಗಳನ್ನು ಇತ್ಯರ್ಥಗೊಳಿಸಿದ್ದು, ಇವುಗಳಲ್ಲಿ ಕೆಲವನ್ನು ಕೈಬಿಡಲಾಗಿದೆ ಹಾಗೂ ಕೆಲವನ್ನು ಹಿಂಬಾಲಿಸಲಾಗಿಲ್ಲ. ಇನ್ನುಳಿದ ೨೭ ಬೇಡಿಕೆಗಳಲ್ಲಿ ಕೆಲವು ಮಂಡಳಿಗೆ ಹಣಕಾಸಿನ ಹೊರೆಯಾದಂತಹವುಗಳಾದುದರಿಂದ ಸದರಿ ವಿಷಯವನ್ನು ಮಂಡಳಿಯ ಮುಂದಿಟ್ಟಿದ್ದು, ಮಂಡಳಿಯು ದಿನಾಂಕ ೧೦-೫-೧೯೬೮ರಂದು ನಡೆದ ಸಭೆಯಲ್ಲಿ ಕೆಲವು ತೀರ್ಮಾನಗಳನ್ನು ಕೈಗೊಂಡಿದೆ. ಈ ಮಂಡಳಿಯ ತೀರ್ಮಾನಪತ್ರವನ್ನು ಯಾವುದೇ ಒಂದು ಕೊನೆಯ ನಿರ್ಣಯ ಕೈಗೊಳ್ಳುವ ಮುನ್ನ ಸಂಘದ ಪದಾಧಿಕಾರಿಗಳೊಡನೆ ಮತ್ತೊಮ್ಮೆ ಚರ್ಚಿಸಬೇಕಾಗಿದೆ.

ಇಷ್ಟರೊಳಗೆ ದಿನಾಂಕ ೩೦-೪-೧೯೬೮ರಂದು ಸಂಘವು ಮಂಡಳಿಗೆ ಒಂದು ಸೂಚನಾ ಪತ್ರವನ್ನು ನೀಡಿ, ನಮ್ಮ ಬೇಡಿಕೆಗಳು ಈಡೇರದೆ ಇರುವುದರಿಂದ ದಿನಾಂಕ ೧೦-೫-೧೯೬೮ರಿಂದ ಶಾಂತಿಯುತವಾಗಿ ಧರಣಿ ಸತ್ಯಾಗ್ರಹವನ್ನು ಹೂಡುವುದಾಗಿ ತಿಳಿಸಿತ್ತು. ಈ ವಿಷಯದಲ್ಲಿ ಮಂಡಳಿಯು ಅಧ್ಯಕ್ಷರು ಮೈಯಿಂಕ್ಕೆವಾಗಿರುವುದಲ್ಲದೆ ಮಾನವ ಮೂಲಕ ಸಂಘದ ಪದಾಧಿಕಾರಿಗಳನ್ನು ಮಂಜ್ಞರ ಹೂಡದಂತೆ ಕೋರಿದಾಗ್ಯೂ ದುರಾದೃಷ್ಟವಶಾತ್ ದಿನಾಂಕ ೯-೫-೧೯೬೮ರ ರಾತ್ರಿಯೇ ಸಂಘದ ಕೆಲವು ಸದಸ್ಯರುಗಳು ನೀರು ಸರಬರಾಜಿನ ನಿಯಂತ್ರಣಕ್ಕಾಗಿ ಇಟ್ಟಿದ್ದಂತಹ ನಳಿಕೆಯ ಕೀಗಳನ್ನು ಸೇವಾ ಶುಲ್ಕ ಕೊಂಡೊಯ್ಯಲು ಪ್ರಯತ್ನಿಸಿದರಲ್ಲದೆ, ನಗರ ನೀರು ಸರಬರಾಜಿಗೆ ಅಡಚಣೆಯುಂಟು ಮಾಡಲು ಪ್ರಯತ್ನಿಸಿದರು. ಆದರೆ ಮಂಡಳಿಯು ಕೆಲವು ನಿಷ್ಠಾವಂತ ನೌಕರರ ಹಾಗೂ ಹಿರಿಯ ಇಂಜಿನಿಯರುಗಳ ಸಹಾಯದಿಂದ ನಗರದಲ್ಲಿ ನೀರು ಸರಬರಾಜಿಗೆ ಯಾವುದೇ ರೀತಿಯಲ್ಲಿಕ್ಕೆ ಉಂಟಾಗದಂತೆ ನೋಡಿಕೊಂಡಿತು. ದಿನಾಂಕ ೧೦-೫-೧೯೬೮ರಂದು ಸಂಘದ ಪದಾಧಿಕಾರಿಗಳು ಕೆಲವು ನೌಕರರನ್ನೊಡಗೂಡಿ ಕಾವೇರಿ ಭವನದ ಮುಂದೆ ಧರಣಿ ಹೂಡಲು ಪಟ್ಟ ಪ್ರಯತ್ನ ಪೋಲಿಸಿನವರ ಸಮಯೋಚಿತ ಕ್ರಮದಿಂದ ನಿಷ್ಫಲಗೊಂಡಿತು. ದಿನಾಂಕ ೧೩-೫-೧೯೬೮ರಂದು ಸಂಘವು ಒಂದು ಪತ್ರಿಕಾ ಪ್ರಕಟಣೆಯನ್ನು ನೀಡಿ ಅದರಲ್ಲಿ ಕಾರ್ಮಿಕ ಆಯುಕ್ತರವರ ಮಧ್ಯ ಪ್ರವೇಶದಿಂದಾಗಿ ಮುಷ್ಕರವನ್ನು ಹಿಂಪಡೆಯಲಾಗಿದೆಯೆಂದು ತಿಳಿಸಿದೆ.

ಶ್ರೀ ಪಟವರ್ಧನ ರತ್ನಾಕರ್.—ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಹಲವಾರು ವಿಚಾರಗಳನ್ನು ತಿಳಿಸಿದ್ದಾರೆ. ನಾನು ಮೂಲಭೂತವಾಗಿ ಪ್ರಶ್ನೆಯನ್ನು ಎತ್ತಿರತಕ್ಕಂಥ ಉದ್ದೇಶ ಏನು ಎಂದರೆ ಈ ಮಂಡಳಿಯ ನೌಕರರು ಇಟ್ಟಿರತಕ್ಕಂಥ ಬೇಡಿಕೆಯನ್ನು ಸರ್ಕಾರ ಪರಿಶೀಲನೆ ಮಾಡಿ ಅದಕ್ಕೆ ಸೂಕ್ತವಾಗಿರತಕ್ಕಂಥ ಒಂದು ತೀರ್ಮಾನವನ್ನು ಕೊಡಬೇಕು ಎನ್ನತಕ್ಕದ್ದು. ಆದರೆ ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಅವರು ಹೇಗೆ ಮುಷ್ಕರ ಮಾಡಿದರು, ಯಾವರೀತಿಯಲ್ಲಿ ಅವರ ಮುಷ್ಕರವನ್ನು ನಿಷ್ಫಲಗೊಳಿಸಲಾಯಿತು, ಅದನ್ನು ಹೇಗೆ ಎದುರಿಸಲಾಯಿತು ಎಂದು ಎರಡನೆಯ ಪ್ಯಾರಾದಲ್ಲಿ ಹೇಳಿದ್ದಾರೆ. ೧೯೬೬ನೇ ಇಸವಿಯಿಂದ ಈ ಒಂದೂವರೆ ಸಾವಿರ ಜನ ನೌಕರರು ತಮ್ಮ ಬೇಡಿಕೆಯನ್ನು ಇಟ್ಟ ಸತ್ಯಾಗ್ರಹ, ಮನವಿ ಮುಖಾಂತರ ಸಚಿವರಿಗೆ ಮತ್ತು ಸಂಬಂಧಪಟ್ಟ ಮಂಡಳಿಯ ಅಧ್ಯಕ್ಷರಿಗೆ ಎಲ್ಲಾ ಹೇಳಿದ್ದರೆ ತದನಂತರದಲ್ಲಿ ಅವರ ಬೇಡಿಕೆಗಳು ಸೂಕ್ತ ರೀತಿಯಲ್ಲಿ ತೀರ್ಮಾನ ಆಗದೇ ಇರುವುದರಿಂದ 'ನೋಡೋಣ' 'ಮಾಡೋಣ' 'ಕೊಡೋಣ'—ಈ ತರಹ ಭರವಸೆಯ ಮಾತುಗಳನ್ನು ೧೯೬೬ನೇ ಇಸವಿಯಿಂದಲೂ ಹೇಳುತ್ತಾ ಬಂದಿರುವುದರಿಂದ ಈ ನೌಕರರು ಏನು ಮಾಡಿದ್ದಾರೆ ಎಂದರೆ ೧೯೬೬ನೇ ಇಸವಿಯಿಂದ ನಾಲ್ಕೈದು ರೀತಿಯಲ್ಲಿ ಸತ್ಯಾಗ್ರಹ ಮಾಡಿದ್ದಾರೆ, ಧರಣಿ ಸತ್ಯಾಗ್ರಹ, ಮನವಿ ಕೊಡುವುದು ಇದನ್ನು ಮಾಡಿದ್ದಾರೆ ಇದನ್ನು ಬಹಳ ಸೌಜನ್ಯದಿಂದ ಗಂಭೀರಯುತವಾಗಿ ಮಾಡಿದ್ದಾರೆ ಆದರೆ ಆವರ ಬೇಡಿಕೆಗಳನ್ನು ಈಡೇರಿಸಿಕೊಡತಕ್ಕಂಥ ದೃಷ್ಟಿಕೋನ ಬಿಟ್ಟು ಅವರನ್ನು ಹೆದರಿಸಿ ಬೆದರಿಸಿ ಏನಾದರೂ ಮಾಡಿ ನಾವು ಅವರನ್ನು ಬಗ್ಗಿಸಬಹುದು ಎನ್ನುವ ಭಾವನೆಯನ್ನು ಇಟ್ಟುಕೊಂಡು ಅವರ ಮೇಲೆ ಒಂದು ರೀತಿಯ ಒತ್ತಡ ತರತಕ್ಕಂಥ ಮನೋಭಾವವನ್ನು ಇಟ್ಟುಕೊಂಡಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಈ ನಾಲ್ಕು ಜನರನ್ನು ಏನು ಅಮಾನತ್ತು ಮಾಡಿದ್ದೀರಿ, ಅದನ್ನು ಪಾಪಾಸ್ಸು ತೆಗೆದುಕೊಳ್ಳಬೇಕು

ಮತ್ತು ಕಾರ್ಮಿಕ ಆಯುಕ್ತರನ್ನು ಇಟ್ಟುಕೊಂಡು ಸಂಧಾನ ಮಾಡತಕ್ಕಂಥ ಇಚ್ಛೆಯನ್ನು ತಾವು ಏನು ವ್ಯಕ್ತಪಡಿಸಿದ್ದೀರಿ, ಆ ಮೂಲಕ ಅವರ ಬೇಡಿಕೆಗಳನ್ನು ಇತ್ಯರ್ಥಮಾಡಿ ಸೂಕ್ತ ಪರಿಹಾರ ಕೊಡುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು ಮತ್ತು ತಾವು ಇದರ ಮಧ್ಯಸ್ಥಿಕೆಯನ್ನು ವಹಿಸಬೇಕು. ತಾವು ಈ ಮಂಡಳಿಯ ಅಧ್ಯಕ್ಷರಿಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ.

ತಾವು ಇದರ ಬಗ್ಗೆ ಗಮನಹರಿಸಬೇಕು. ಇಷ್ಟಾದರೂ ಕೂಡ ಮಂಡಲಿಯು ಹಿಂದಿನ ಅಧ್ಯಕ್ಷರು ಹೆಚ್ಚು ಸಹಾಯ ಕೊಟ್ಟಿಲ್ಲವೆಂದು ನೌಕರವರ್ಗದವರು ಹೇಳಿದ್ದಾರೆ. ಆದ್ದರಿಂದ ತಾವು ಈ ಬಗ್ಗೆ ಸೂಕ್ತವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಹೇಳಿಕೆಯಲ್ಲಿ ಪ್ರಸ್ತಾಪ ಮಾಡಿರುವ ಹಾಗೆ ಹಿಂದಿನ ನೌಕರರ ಸಂಘದವರು ಹಲವಾರು ಬೇಡಿಕೆಗಳನ್ನು ಇಟ್ಟಿದ್ದರು. ನಾನು ಬಂದಮೇಲೆ ೧೬-೭-೧೯೮೭ ರಂದು ಈ ನೌಕರರ ಸಂಘದವರ ಬೇಡಿಕೆಗಳನ್ನು ಇತ್ಯರ್ಥ ಮಾಡಿದ್ದೇನೆ ಮತ್ತೆ ಈಗ ಆಯ್ಕೆಯಾಗಿರತಕ್ಕ ನೌಕರ ಸಂಘ ಹಲವಾರು ಬೇಡಿಕೆಗಳನ್ನು ಇಟ್ಟಿದೆ. ಇದರಲ್ಲಿ ಹಲವಾರು ಸಣ್ಣಪುಟ್ಟ ಬೇಡಿಕೆಗಳನ್ನು, ನೌಕರ ಸಂಘದವರು ಮತ್ತು ಮಂಡಲಿಯವರು ಮಾತನಾಡಿ ಇತ್ಯರ್ಥಮಾಡಿಕೊಂಡಿದ್ದಾರೆ. ಕೆಲವು ಮುಖ್ಯವಾದ ಬೇಡಿಕೆಗಳ ಬಗ್ಗೆ ೨೧-೫-೧೯೮೭ ರಂದು ನಾವು ಚರ್ಚೆ ಮಾಡಿದ್ದೇವೆ. ಈ ಬೇಡಿಕೆಗಳ ಬಗ್ಗೆ ಹಣಕಾಸಿನ ಹೊರೆ ಬರುತ್ತದೆ. ಆದ್ದರಿಂದ ಇವುಗಳ ಬಗ್ಗೆ ಸಮಾಲೋಚನೆ ಮಾಡಿ ಪರಿಹಾರ ಹುಡುಕುತ್ತಿದ್ದೇವೆ. ಬೇರೆ ಬೇರೆ ಇಲಾಖೆಗಳಲ್ಲಿ ಅಂದರೆ ಬಿ.ಡಿ.ಎ, ನಗರ ಕಾರ್ಪೊರೇಷನ್, ಲೇಬರ್ ಡಿಪಾರ್ಟ್‌ಮೆಂಟ್, ಲಾ ಡಿಪಾರ್ಟ್‌ಮೆಂಟ್‌ಗಳೊಂದಿಗೆ ವ್ಯವಹಾರ ಮಾಡಿ, ಬೇಡಿಕೆಗಳ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಯಾವುದೇ ಕಾರಣದಿಂದ ಈ ಮಂಡಳಿಯು ನೌಕರರ ಬೇಡಿಕೆಗಳನ್ನು ಮುಂದೂಡಿಲ್ಲ. ಆಗಾಗ ಪರಿಶೀಲನೆ ಮಾಡಿ, ಸಾಧ್ಯವಾದಷ್ಟು ಪರಿಹಾರ ನೀಡಿದೆ. ಳ ಮಂದಿಯನ್ನು ಅಮಾನತ್ತಿನಲ್ಲಿಟ್ಟಿರುವುದು ಬೇರೆ ಕಾರಣಕ್ಕಾಗಿ. ಹಿಂದಿನ ನೌಕರರ ಸಂಘದ ಮೇಲೆ ಹಲ್ಲೆ ಮಾಡಿ, ಪೋಲೀಸ್ ಕೇಸ್ ಹಾಕಿ, ಅವರ ಮೇಲೆ ಎಫ್ ಐ.ಆರ್., ಚಾರ್ಜ್‌ಷೀಟ್ ಹಾಕಿರುವುದರಿಂದ, ಸೇವಾ ನಿಯಮಾವಳಿ ಪ್ರಕಾರ ಅಮಾನತ್ತಿನಲ್ಲಿಟ್ಟಿದ್ದೇವೆ. ಅವರನ್ನು ಅಮಾನತ್ತಿನಲ್ಲಿಟ್ಟಿರುವುದು ನೌಕರರ ಬೇಡಿಕೆಗೋಸ್ಕರ ಅಲ್ಲ. ಇದು ಒಂದುಕಡೆ ಇರಲಿ. ನೌಕರರ ಬೇಡಿಕೆಗಳ ಬಗ್ಗೆ ಮಂಡಲಿಯೊಂದಿಗೆ ಚರ್ಚೆ ಮಾಡಿ, ಆದಷ್ಟು ಬೇಗ ಇತ್ಯರ್ಥ ಮಾಡುವುದಕ್ಕೆ ಆದೇಶ ನೀಡುತ್ತೇನೆ.

ಶ್ರೀ ಪಟಪಟ್ಟಿ ರತ್ನಾಕರ್.—ಮಾನ್ಯ ಮಂತ್ರಿಗಳು ಅಮಾನತ್ತಿನಲ್ಲಿಟ್ಟಿರುವ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಹಲ್ಲೆ ಮಾಡಿರತಕ್ಕ ವಿಚಾರಗಳು ಇದ್ದರೆ, ಖಂಡಿತವಾಗಿಯೂ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದು ನಿಮ್ಮ ತೀರ್ಮಾನಕ್ಕೆ ಬಿಟ್ಟ ವಿಚಾರ. ಸತ್ಯಾಗ್ರಹ ಮಾಡುವುದಕ್ಕೆ, ಧರಣಿ ಮಾಡುವುದಕ್ಕೆ ಪ್ರೇರೇಪಣೆ ಮಾಡಿದ್ದಾರೆಂದೂ ಈ ಕ್ರಮ ಕೈಗೊಂಡಿದ್ದರೆ, ದಯಮಾಡಿ, ನೌಕರರ ಹಿತದೃಷ್ಟಿಯಿಂದ ಅದನ್ನು ವಾಪಸ್ ತೆಗೆದುಕೊಳ್ಳಲೇಕು. ಮಾನ್ಯ ಮಂತ್ರಿಗಳು, ದಿನಾಂಕ: ೩೦-೪-೧೯೮೮ ರೊಳಗೆ ಅವರ ಬೇಡಿಕೆಯನ್ನು ಈಡೇರಿಸಿ ಎಂದು ಈಗಿನ ಅಧ್ಯಕ್ಷರಿಗೆ ಆದೇಶವನ್ನು ಕಳುಹಿಸಿದ್ದಾರೆ. ಈಗಿನ ಅಧ್ಯಕ್ಷರು ನಮ್ಮ ಸಚಿವರ ಮಾತಿಗೆ ಗಮನಕೊಡದೇ, ನೌಕರರ ಹೊಂದಾಣಿಕೆಯನ್ನು ಇಟ್ಟುಕೊಳ್ಳದೇ, ತಾವು ಏನು ಆದೇಶ ಕೊಟ್ಟಿದ್ದೀರಿ, ಆದನ್ನು ಪಾಲಿಸಿಲ್ಲ. ನೌಕರ ವರ್ಗದ ನಡುವೆ ಉತ್ತಮ ಸಂಬಂಧವನ್ನು ಇಟ್ಟುಕೊಳ್ಳುವುದರಲ್ಲಿ ಮಂಡಲಿಯ ಅಧ್ಯಕ್ಷರ ಕೌಶಲತೆ ಅಡಗಿದೆ. ಸದಾ ಘರ್ಷಣೆ ಮಾಡುವುದು, ಸಂಘರ್ಷ ವಾತಾವರಣವನ್ನು ನಿರ್ಮಾಣ ಮಾಡುವುದರಿಂದ, ಯಾವುದೇ ಪರಿಹಾರವನ್ನು ಸಂಘಸಂಸ್ಥೆಗಳಲ್ಲಿ ಕಾಣುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸಚಿವರು ನಿಗಾ ವಹಿಸುತ್ತೇನೆಂದು ಹೇಳಿದ್ದಾರೆ, ಬೇಡಿಕೆಯನ್ನು ಈಡೇರಿಸುವ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದಾರೆ. ನಿಜವಾಗಿಯೂ ಆ ಕೆಲಸ ಮಾಡಿದರೆ, ನೌಕರ ವರ್ಗದವರೆಲ್ಲರೂ, ಮಾನ್ಯ ಸಚಿವರಿಗೆ ಅಭಾರಿಯಾಗುತ್ತಾರೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಈ ಬಗ್ಗೆ ನೌಕರ ಸಂಘದವರ ಮತ್ತು ಮಂಡಲಿಯವರ ಸಭೆ ಕರೆದು, ಉಳಿದಿರತಕ್ಕ ಬೇಡಿಕೆಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ.